4	ಕುಂದಾಪುರ ತಾಲ್ಲೂಕಿನ ಗಂಗೊಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರ	ಅಲ್ಯೂಮಿನಿಯಂ ಕಿಟಕಿಗಳನ್ನು ಅಳವಡಿಸುವುದು, ಬಾಗಿಲುಗಳಿಗೆ ಶಟರ್ಸ್ ಅಳವಡಿಸುವ ಹಾಗೂ ಮುಕ್ತಾಯ ಹಂತದ ಕಾಮಗಾರಿಗಳು ಪ್ರಗತಿಯಲ್ಲಿದೆ. ಸದರಿ ಕಾಮಗಾರಿಯನ್ನು ಡಿಸೆಂಬರ್ 2015ರ ಅಂತ್ಯದೊಳಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಇ)

ಕ್ರ. ಸಂ	ಕಾಮಗಾರಿಯ ಹೆಸರು	ಹಸ್ತಾಂತರಿಸಿದ ದಿನಾಂಕ	ಗುತ್ತಿಗೆದಾರರ ಹೆಸರು
1	ಕುಂದಾಪುರ ತಾಲ್ಲೂಕಿನ ಕಿರಿಮಂಜೇಶ್ವರ ಪ್ರಾಥಮಿಕ ಆರೋಗ್ಯ ಕೇಂದ್ರ	27.11.2013	ಮೆ॥ ಕೆ.ಬಿ.ಆರ್. ಇನ್‌ಫ್ರಾಟೆಕ್ ಪ್ರೈ.ಲಿ., ಬೆಂಗಳೂರು
2	ಕುಂದಾಪುರ ತಾಲ್ಲೂಕಿನ ಹಕ್ಲಾಡಿ ಪ್ರಾಥಮಿಕ ಆರೋಗ್ಯ ಕೇಂದ್ರ	10.09.2013	
3	ಕುಂದಾಪುರ ತಾಲ್ಲೂಕಿನ ಹಳ್ಳಿಹೊಳೆ ಪ್ರಾಥಮಿಕ ಆರೋಗ್ಯ ಕೇಂದ್ರ	21.10.2013	
4	ಕುಂದಾಪುರ ತಾಲ್ಲೂಕಿನ ಗಂಗೊಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರ	24.10.2013	ಶ್ರೀ. ಸುಧೀರ್ ಕುಮಾರ್ ಶೆಟ್ಟಿ, ಕುಂದಾಪುರ.
5	ಕುಂದಾಪುರ ತಾಲ್ಲೂಕಿನ ಬೆಳ್ತಲ ಎ.ಎನ್.ಎಂ ಉಪಕೇಂದ್ರ	ನಬಾರ್ಡ್‌ನಿಂದ ಕಾಮಗಾರಿಗೆ ಅನುಮೋದನೆ ದೊರೆತ ನಂತರ ಪ್ರಾರಂಭಿಸಲಾಗುವುದು.	

ರಾತ್ರಿ 1 ಗಂಟೆಯವರೆಗೆ ಬಿ.ಎಂ.ಟಿ.ಸಿ. ಬಸ ಸಂಚಾರ

5116 (4227); ಶ್ರೀ ಗೋಪಾಲಯ್ಯ ಕೆ. (ಮಹಾಲಕ್ಷ್ಮೀ ಲೇಔಟ್)

ಅ) ಬೆಂಗಳೂರು ನಗರದಲ್ಲಿ ಪ್ರತಿ ದಿನ ಸಂಚರಿಸುತ್ತಿರುವ ಬಿ.ಎಂ.ಟಿ.ಸಿ ಬಸ್‌ಗಳ ಸಂಖ್ಯೆ ಎಷ್ಟು;

ಆ) ಗಾರ್ಮೆಂಟ್‌ಗಳಿಗೆ ಹೋಗತಕ್ಕ ಮಹಿಳೆಯರು, ಇತರೆ ಕಾರ್ಮಿಕರು ರಾತ್ರಿ ವೇಳೆ ಸುರಕ್ಷಿತವಾಗಿ ವಾಪಸ್ಸಾಗಲು ಹೆಚ್ಚಿನ ಬಸ್ ಸೌಕರ್ಯಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ನಗರದಾದ್ಯಂತ ರಾತ್ರಿ ಎಷ್ಟು ಗಂಟೆಯವರೆಗೆ ಬಿ.ಎಂ.ಟಿ.ಸಿ ಬಸ್ ಸಂಚಾರವನ್ನು ಒದಗಿಸಲಾಗಿದೆ;

ಈ) ರಾತ್ರಿ ವೇಳೆ ಪ್ರಯಾಣಿಕರು ಬಸ್ ಸೌಕರ್ಯವಿಲ್ಲದೆ, ಖಾಸಗಿ ವಾಹನಗಳ ಮೊರೆ ಹೋಗುವುದನ್ನು ತಪ್ಪಿಸಲು ಹಾಗೂ ಸುರಕ್ಷತೆ ದೃಷ್ಟಿಯಿಂದ, ರಾತ್ರಿ ಒಂದು ಗಂಟೆವರೆಗೆ ವಿವಿಧ ಬಡಾವಣೆಗಳಿಗೆ ಬಿ.ಎಂ.ಟಿ.ಸಿ ಬಸ್ ಸೌಕರ್ಯ ಒದಗಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಸಚಿವರು)

ಅ) ಬೆಂಗಳೂರು ನಗರದಲ್ಲಿ ಪ್ರತಿದಿನ 6235 ಬಿ.ಎಂ.ಟಿ.ಸಿ ಬಸ್‌ಗಳು ಸಂಚರಿಸುತ್ತಿವೆ.

ಆ) ಪ್ರಸ್ತುತ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು 6235 ಅನುಸೂಚಿಗಳೊಂದಿಗೆ ಸಾರ್ವಜನಿಕ ಪ್ರಯಾಣಿಕರಿಗೆ ಸಾರಿಗೆ ಸೇವೆಯನ್ನು ಒದಗಿಸುತ್ತಿದೆ. ಸಾರ್ವಜನಿಕ ಪ್ರಯಾಣಿಕರ ಹಾಗೂ ಮಹಿಳಾ ಪ್ರಯಾಣಿಕರ ಹಿತವನ್ನು ಗಮನದಲ್ಲಿಟ್ಟುಕೊಂಡು ಸಂಸ್ಥೆಯು ಎರಡನೇ ಪಾಳಿಯಲ್ಲಿ 4284 ಅನುಸೂಚಿಗಳನ್ನು ಕಾರ್ಯಾಚರಣೆ

ಮಾಡುತ್ತಿದ್ದು ಸದರಿ ಅನುಸೂಚಿಗಳು ರಾತ್ರಿ 10.00 ರಿಂದ 11.00 ಗಂಟೆಯವರೆಗೂ ಕಾರ್ಯಾಚರಣೆಯಲ್ಲಿರುತ್ತವೆ ಹಾಗೂ ತಡರಾತ್ರಿ ಪ್ರಯಾಣಿಸುವ ಪ್ರಯಾಣಿಕರ ಸುರಕ್ಷತೆಗಾಗಿ 65 ರಾತ್ರಿ ಸೇವೆಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ. ಈ ಸೇವೆಗಳು ನಗರದ ವಿವಿಧ ಭಾಗಗಳಿಗೆ ಮಧ್ಯರಾತ್ರಿ 12.00 ಘಂಟೆವರೆಗೆ ಕಾರ್ಯಾಚರಣೆ ಮಾಡುತ್ತಿವೆ.

ಬೆಂಗಳೂರು ನಗರದಲ್ಲಿರುವ ಗಾರ್ಮೆಂಟ್ಸ್‌ಗಳಲ್ಲಿ ಉದ್ಯೋಗ ಮಾಡುತ್ತಿರುವ ಮಹಿಳಾ ನೌಕರರ ಅನುಕೂಲಕ್ಕಾಗಿ ಸಂಸ್ಥೆಯು ಮೊದಲನೇ ಹಂತದಲ್ಲಿ ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ ಸ್ಥಾಪಿತವಾಗಿರುವ ಸುಮಾರು 11 ಗಾರ್ಮೆಂಟ್ ಕಾರ್ಖಾನೆಯ ಮಹಿಳಾ ನೌಕರರಿಗೆ ಸಾರಿಗೆ ಸೌಲಭ್ಯ ಒದಗಿಸುವ ಕುರಿತಂತೆ ಸಂಬಂಧಿಸಿದ ಕಾರ್ಮಿಕ ಇಲಾಖೆ ಮತ್ತು ಗಾರ್ಮೆಂಟ್ಸ್ ಮಾಲೀಕರುಗಳ ಸಮನ್ವಯದಲ್ಲಿ ಸರ್ಕಾರದ ಮಟ್ಟದಲ್ಲಿ ಸಭೆಯನ್ನು ನಡೆಸಲಾಗಿರುತ್ತದೆ.

ತತ್ಸಂಬಂಧ ಸಂಸ್ಥೆಯು 11 ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ಕೆಲಸಕ್ಕಾಗಿ ಬರುವ ಮಹಿಳಾ ಕಾರ್ಮಿಕರ ವಿವರಗಳನ್ನು ಹಾಗೂ ಕಾರ್ಮಿಕರು ಬರುತ್ತಿರುವ ಸ್ಥಳಗಳನ್ನು/ಮಾರ್ಗಗಳನ್ನು ಗುರುತಿಸಿ ಕಾರ್ಮಿಕರ ಸಂಖ್ಯೆಯ ಸಮೀಕ್ಷೆಯನ್ನು ಮಾಡಿರುತ್ತದೆ. ಈ ಮಹಿಳಾ ಕಾರ್ಮಿಕರ ಸಂಖ್ಯೆಗನುಸಾರವಾಗಿ ಒಟ್ಟಾರೆ 64 ಮಾರ್ಗಗಳಲ್ಲಿ ಸುಮಾರು 100 ಬಸ್ಸುಗಳನ್ನು ವ್ಯವಸ್ಥೆಗೊಳಿಸಲು ಯೋಜನೆ ಹಾಕಿಕೊಂಡಿರುತ್ತದೆ.

ಈ ಸಂಬಂಧವಾಗಿ ಗಾರ್ಮೆಂಟ್ಸ್‌ಗಳಲ್ಲಿ ಉದ್ಯೋಗ ಮಾಡುತ್ತಿರುವ ಮಹಿಳಾ ನೌಕರರಿಗೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ಸಂಸ್ಥೆಯು ಕಾರ್ಮಿಕ ಇಲಾಖೆ, ಗಾರ್ಮೆಂಟ್ಸ್ ಮಾಲೀಕರು ಮತ್ತು ಸರ್ಕಾರದ ಮಟ್ಟದಲ್ಲಿ ಸಭೆ ನಡೆಸಿ ಸಭೆಯಲ್ಲಿ ಚರ್ಚಿಸಿ ರಿಯಾಯಿತಿ ದರ ರೂ. 1000/– ಮಾಸಿಕ ಪಾಸುಗಳನ್ನು ವಿತರಿಸಲು ನಿರ್ಧರಿಸಲಾಗಿರುತ್ತದೆ.

ಈ ಸಂಬಂಧ ಈಗಾಗಲೇ ಅಪರ ಮುಖ್ಯ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ, ಕರ್ನಾಟಕ ಸರ್ಕಾರವರಿಗೆ ಬೆಂ.ಮ.ಸಾ.ಸಂಸ್ಥೆಯ ವತಿಯಿಂದ ನೀಡಲಾಗುವ ಸಾರಿಗೆ ಸೌಲಭ್ಯ ಹಾಗೂ ಮಾಸಿಕ ಪಾಸುಗಳ ವಿತರಣೆ ಸಂಬಂಧವಾಗಿ ಸಂಬಂಧಿಸಿದ ಅಧಿಕಾರಿಗಳು ಹಾಗೂ ಗಾರ್ಮೆಂಟ್ಸ್ ಮಾಲಿಕರುಗಳು ಬೆಂ.ಮ.ಸಾ.ಸಂಸ್ಥೆಯನ್ನು ಸಂಪರ್ಕಿಸಿ ಸಂಸ್ಥೆಯ ವತಿಯಿಂದ ಗಾರ್ಮೆಂಟ್ಸ್ ಮಹಿಳಾ ನೌಕರರಿಗೆ ವಿತರಿಸಲು ಯೋಜಿಸಲಾದ ಪಾಸುಗಳ ವಿತರಣೆಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಕೋರಲಾಗಿರುತ್ತದೆ. ಆದರೆ ಇಲ್ಲಿಯವರೆಗೆ ಗಾರ್ಮೆಂಟ್ಸ್ ಕಾರ್ಖಾನೆಯ ಮಾಲೀಕರಿಂದ ಯಾವುದೇ ಪ್ರತಿಕ್ರಿಯೆ ಬಂದಿರುವುದಿಲ್ಲ.

ಇ) ಸಂಸ್ಥೆಯು ಜನದಟ್ಟಣೆ ಇರುವ ಸ್ಥಳಗಳಿಗೆ ಮತ್ತು ಪ್ರಮುಖ ಸ್ಥಳಗಳಿಗೆ ರಾತ್ರಿ ಸೇವೆಗಳನ್ನು ಒದಗಿಸುತ್ತಿದ್ದು, ಸದರಿ ಸೇವೆಗಳು ಮಧ್ಯರಾತ್ರಿ 12.00 ಗಂಟೆಯವರೆಗೆ ಕಾರ್ಯಾಚರಣೆಯಲ್ಲಿರುತ್ತವೆ.

ಈ) ಪ್ರಸ್ತುತ ಸಂಸ್ಥೆಯು ರಾತ್ರಿ ವೇಳೆ ಪ್ರಯಾಣಿಸುವ ಸಾರ್ವಜನಿಕ ಪ್ರಯಾಣಿಕರ ಹಿತವನ್ನು ಗಮನದಲ್ಲಿರಿಸಿ 65 ರಾತ್ರಿ ಸೇವೆಗಳನ್ನು ಮಧ್ಯರಾತ್ರಿ 12.00 ಗಂಟೆಯವರೆಗೆ ಹಾಗೂ ಬೆಳಿಗ್ಗೆ 04.00 ಗಂಟೆಯಿಂದ ಕಾರ್ಯಾಚರಣೆಯನ್ನು ಮಾಡುತ್ತಿದೆ.